ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ:03/ಇಸಿಎಸ್(1)/2021

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
email:dte.commissioner@gmail.com
ದಿನಾಂಕ:26-07-2021

## ಸುತ್ತೋಲೆ

ವಿಷಯ: COVID-19 Pandemic ಹಿನ್ನೆಲೆಯಲ್ಲಿ ಅನುಸರಿಸಬೇಕಾದ ಪ್ರಮಾಣಿತ ಕಾರ್ಯನಿರ್ವಹಣಾ ಕ್ರಮಗಳನ್ನು (Standard Operating Procedure) ನೀಡುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ:ಆಕುಕನಿ/ಆಪ್ತ/29/2020-21 ದಿನಾಂಕ:17/06/2020

***********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಪರೀಕ್ಷಾ ಕೇಂದ್ರದಲ್ಲಿ COVID-19 Pandemic ಹಿನ್ನೆಲೆಯಲ್ಲಿ ದಿನಾಂಕ:09-08-2021 ರಿಂದ 30-08-2021 ರವರೆಗೆ ರಾಜ್ಯಾದಾದ್ಯಂತ 2020-21ನೇ ಸಾಲಿನ ಡಿಪ್ಲೋಮ 1/3/5ನೇ ಸೆಮಿಸ್ಟರ್ ಹಾಗೂ ಬ್ಯಾಕ್‌ಲಾಗ್ ಥಿಯರಿ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಪ್ರಾಂಶುಪಾಲರುಗಳು/ ಉಪನ್ಯಾಸಕರು/ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ತೆಗೆದುಕೊಳ್ಳಬೇಕಾದ ಕಾರ್ಯಸಾಧುವಾದ ಪ್ರಮಾಣಿತ ಕಾರ್ಯನಿರ್ವಹಣಾ ಕ್ರಮಗಳು (Standard Operating Procedure) ಈ ಕೆಳಕಂಡಂತೆ ನೀಡಲಾಗಿದೆ. ಪ್ರಿನ್ಸಿಪಾಲರುಗಳು/ ಪರೀಕ್ಷಾ ಮುಖ್ಯ ವೀಕ್ಷಕರು/ ಮುಖ್ಯ ಅಧೀಕ್ಷಕರು/ ಉಪ ಮುಖ್ಯ ಅಧೀಕ್ಷಕರುಗಳು ತಮ್ಮ ಪರೀಕ್ಷಾ ಕೇಂದ್ರಕ್ಕೆ ಸಂಬಂಧಪಟ್ಟ ಎಲ್ಲಾ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯವರ ಆರೋಗ್ಯ ಸುರಕ್ಷತೆ ದೃಷ್ಟಿಯಿಂದ ಕೊರೊನ ಸಾಂಕ್ರಾಮಿಕ ಪಿಡುಗು ಹರಡದಂತೆ ಕ್ರಮವಹಿಸಿ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಲು ತಿಳಿಸಲಾಗಿದೆ.

**ಪರೀಕ್ಷಾ ಕೇಂದ್ರಗಳ ಪ್ರಿನ್ಸಿಪಾಲರುಗಳು/ ಉಪನ್ಯಾಸಕರು/ ಸಿಬ್ಬಂದಿಯವರು ಅನುಸರಿಸಬೇಕಾದ ಪ್ರಮಾಣಿತ ಕಾರ್ಯ ನಿರ್ವಹಣಾ ಕ್ರಮಗಳು (Standard Operating Procedure)**

1. ಸಂಸ್ಥೆಗಳು ಕೇಂದ್ರ ಧನ ಸಹಾಯ ಆಯೋಗ (ಯುಜಿಸಿ), ರಾಜ್ಯ ಸರ್ಕಾರದ ಆರೋಗ್ಯ ಇಲಾಖೆ ಮತ್ತು ಸ್ಥಳೀಯ ಆಡಳಿತ ನೀಡಿರುವ ಎಲ್ಲಾ ಸುರಕ್ಷಿತ ಕ್ರಮಗಳನ್ನು ಪಾಲಿಸುವುದು.

2. ಸಂಸ್ಥೆಗಳು ವಿದ್ಯಾರ್ಥಿಗಳ ಆರೋಗ್ಯ ಮತ್ತು ಸುರಕ್ಷತೆ ಬಗ್ಗೆ ಗರಿಷ್ಠ ಮಟ್ಟದ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುವುದು.

3. ಸಂಸ್ಥೆಗಳಲ್ಲಿ ಪರೀಕ್ಷೆಗಳು ನಡೆಯುವ ಸಮಯದಲ್ಲಿ ಪ್ರಮಾಣಿತ ಕಾರ್ಯಾಚರಣೆ ಪದ್ಧತಿ (ಎಸ್‌ಒಪಿ) ಗಳನ್ನು ಜಾರಿಗೊಳಿಸಲು ಎಲ್ಲಾ ಸಿಬ್ಬಂದಿ/ಉಪನ್ಯಾಸಕರುಗಳು ಹಾಜರಿರಲು ಸೂಚಿಸುವುದು.

4. ಸಂಸ್ಥೆಗಳಲ್ಲಿ ವೈದ್ಯರು ಮತ್ತು ಅರೆವೈದ್ಯಕೀಯ ಸಿಬ್ಬಂದಿ ಮತ್ತು ಆಂಬ್ಯುಲೆನ್ಸ್ ವಾಹನಗಳು ತುರ್ತು ಸಂದರ್ಭಗಳಲ್ಲಿ ತತ್‌ಕ್ಷಣ ಲಭ್ಯವಾಗುವಂತೆ ವ್ಯವಸ್ಥೆ ಮಾಡುವುದು. ಸ್ಥಳೀಯ ಆಡಳಿತ/ ಆರೋಗ್ಯ ಇಲಾಖೆಯ ಅಧಿಕಾರಿಗಳು/ ಜಿಲ್ಲಾಡಳಿತ ಇವರುಗಳಿಗೆ ದಿನಾಂಕ:09-08-2021 ರಿಂದ 30-08-2021 ರವರೆಗೆ ಪರೀಕ್ಷೆಗಳು ನಡೆಯುವ ಬಗ್ಗೆ ಲಿಖಿತವಾಗಿ ತಿಳಿಸಿ, ಪರೀಕ್ಷಾ ಅವಧಿಯಲ್ಲಿ ನಿರಂತರ ಸಂಪರ್ಕದಲ್ಲಿದ್ದು, ಅವರುಗಳ ಪೂರ್ಣ ಸಹಕಾರದೊಂದಿಗೆ ಪರೀಕ್ಷೆಗಳು ಸುಲಲಿತವಾಗಿ ನಡೆಯುವಂತೆ ನೋಡಿಕೊಳ್ಳುವುದು.

5. ಸಂಸ್ಥೆಗಳ ಪ್ರಾಚಾರ್ಯರುಗಳು ಪ್ರಮಾಣಿತ ಕಾರ್ಯಾಚರಣೆ ಪದ್ಧತಿ (SOP) ಗಳನ್ನು ಜಾರಿಗೊಳಿಸುವಲ್ಲಿ ಸಂಪೂರ್ಣ ಜವಾಬ್ದಾರರಾಗಿದ್ದು "COVID-19 SOP Implimentation Task Force" ರಚಿಸಲು ಸೂಚಿಸಲಾಗಿದೆ.

6. ಸಂಸ್ಥೆಯಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಲು ಅನುವಾಗುವಂತಹ ಪೋಸ್ಟರ್, ಚಿಹ್ನೆ/ಸಂಕೇತಗಳನ್ನು ಅಲ್ಲಲ್ಲಿ ಪ್ರದರ್ಶಿಸುವುದು. ಅಗತ್ಯಕ್ಕೆ ತಕ್ಕಂತೆ ಸೋಪ್/ಸ್ಯಾನಿಟೈಜರ್, ಕುಡಿಯುವ ನೀರು, ಸ್ವಚ್ಛ ಶೌಚಾಲಯ /ಶೌಚಾಲಯಗಳಲ್ಲಿ ನೀರಿನ ಸೌಲಭ್ಯ ಹಾಗೂ Pedal push cover ಕಸದ ಬುಟ್ಟಿಗಳ ನೈರ್ಮಲ್ಯ ಹಾಗೂ ಆರೋಗ್ಯ ಸುರಕ್ಷತ ಕ್ರಮಗಳನ್ನು ಕಾಪಾಡುವುದು.

7. ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಕಾರ್ಯ ಚಟುವಟಿಕೆಗಳಲ್ಲಿ ನಿರತರಾದ ಎಲ್ಲಾ ಉಪನ್ಯಾಸಕರು, ಪರೀಕ್ಷಾ ಕಾರ್ಯಕಾರಿ ಸಿಬ್ಬಂದಿ, ಹೌಸ್‌ಕೀಪಿಂಗ್ ಸಿಬ್ಬಂದಿ, ಭದ್ರತಾಸಿಬ್ಬಂದಿ ಮತ್ತು ಇತರೆ ಎಲ್ಲಾ ಸಿಬ್ಬಂದಿಯವರ ಸಂಪರ್ಕ ಮಾಹಿತಿಯನ್ನು ಮ್ಯಾನುಯಲ್ / ಡಿಜಿಟಲ್ ರೂಪದಲ್ಲಿ ನಿರ್ವಹಿಸುವುದು.

8. ಸಂಸ್ಥೆಯ ಬಸ್ ಹಾಗೂ ಇತರೆ ಸಾಗಾಣಿಕ ವಾಹನಗಳನ್ನು ಪ್ರತಿದಿನ ಸ್ಯಾನಿಟೈಜ್ ಮಾಡುವುದು.

9. ಸಂಸ್ಥೆಯ ಪ್ರವೇಶ/ ಹೊರಹೋಗುವ ದ್ವಾರಗಳಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಲು ಅನುವಾಗುವಂತಹ ಪೋಸ್ಟರ್, ಚಿಹ್ನೆ/ಸಂಕೇತಗಳನ್ನು ಅಲ್ಲಲ್ಲಿ ಪ್ರದರ್ಶಿಸುವುದು. ಸದರಿ ದ್ವಾರಗಳು/ ಕ್ಯಾಂಟೀನ್/ಹ್ಯಾಂಡ್ ಸ್ಯಾನಿಟೈಜರ್ ಯಂತ್ರ/ ಶೌಚಾಲಯ ಗಳ ಹತ್ತಿರ ಜನಸಂದಣಿಯಾಗದಂತೆ ಕನಿಷ್ಟ 2 ಮೀಟರ್ ಅಂತರದ ಗುರುತಿನಲ್ಲಿ ಒಬ್ಬೊಬ್ಬರಾಗಿ ಹೋಗುವಂತೆ ನೋಡಿಕೊಳ್ಳುವುದು.

10. ಸಂಸ್ಥೆಗಳಲ್ಲಿ ಅಗತ್ಯವಿರುವ ಥರ್ಮಲ್ ಸ್ಕ್ಯಾನರ್‌ಗಳು, ಮಾಸ್ಕ್ ಮತ್ತು ಕೈಗವಸುಗಳು ಲಭ್ಯವಿರುವಂತೆ ನೋಡಿಕೊಳ್ಳುವುದು. ಸಂಸ್ಥೆಯ ಹಿರಿಯ ಸಿಬ್ಬಂದಿಯವರು ಪ್ರವೇಶ / ಹೊರಹೋಗುವ ದ್ವಾರಗಳಲ್ಲಿ ಹಾದುಹೋಗುವವರ ಥರ್ಮಲ್ ಸ್ಕ್ಯಾನಿಂಗ್, ಮಾಸ್ಕ್ ಧರಿಸಿರುವ ಬಗ್ಗೆ ನಿಗಾ ವಹಿಸುವುದು.

11. ಸಿಬ್ಬಂದಿ ಪ್ರವೇಶದ ಸ್ಥಳದಲ್ಲಿ ಥರ್ಮಲ್ ಸ್ಕ್ಯಾನಿಂಗ್ ಕಡ್ಡಾಯವಾಗಿದ್ದು, ಯಾವುದೇ ಸಿಬ್ಬಂದಿಯ ಶರೀರದ ಉಷ್ಣತೆ ಥರ್ಮಲ್ ಸ್ಕ್ಯಾನಿಂಗ್‌ನ ನಿಗದಿತ ಉಷ್ಣತಾ ಮಾನದಂಡವನ್ನು ಮೀರಿದ್ದಲ್ಲಿ ಅಂತಹ ಸಿಬ್ಬಂದಿಯು ಕೂಡಲೇ ಪರೀಕ್ಷಾ ಕೇಂದ್ರ ಬಿಡುವಂತೆ ಸೂಚಿಸುವುದು.

12. ಪರೀಕ್ಷಾ ಕಾರ್ಯ ಚಟುವಟಿಕೆಗಳಲ್ಲಿ ನಿರತರಾದ ಎಲ್ಲಾ ಉಪನ್ಯಾಸಕರು/ ಪರೀಕ್ಷಾ ಕಾರ್ಯಕಾರಿ ಸಿಬ್ಬಂದಿಯವರು ಪ್ರತಿ ದಿನ ಹೊಸ ಮಾಸ್ಕ್ ಹಾಗೂ ಕೈಗವಸುಗಳನ್ನು ಧರಿಸುವುದು ಕಡ್ಡಾಯವಾಗಿರುತ್ತದೆ.

13. ಪರೀಕ್ಷಾ ಕೇಂದ್ರಗಳಲ್ಲಿನ ಶೌಚಾಲಯಗಳು, ಕಿಟಕಿ/ ಬಾಗಿಲುಗಳ ಕೈಪಿಡಿಗಳು, ಮೆಟ್ಟಿಲುಗಳ ಕೈಪಿಡಿಗಳು, ಲಿಫ್ಟ್ ಬಟನ್‌ಗಳು, ವ್ಹೀಲ್ ಚೇರ್‌ಗಳು ಇವುಗಳನ್ನು ಆಗಿಂದಾಗ್ಗೆ ಮತ್ತು ದಿನದ ಅಂತ್ಯದಲ್ಲಿ ಸ್ವಚ್ಛಗೊಳಿಸಿ ಸ್ಯಾನಿಟೈಜ್ ಮಾಡುವುದು.

14. ಪರೀಕ್ಷಾ ಕೇಂದ್ರದಲ್ಲಿ ಉಪಯೋಗಿಸಲಾಗಿರುವ ಮಾಸ್ಕ್/ಕೈಗವಸುಗಳು ಇನ್ನಿತರ ಎಲ್ಲಾ ರೀತಿಯ ತ್ಯಾಜ್ಯಗಳುಳ್ಳ Pedal push cover ಕಸದ ಬುಟ್ಟಿಗಳನ್ನು ಆರೋಗ್ಯ ಇಲಾಖೆಯ ಮಾರ್ಗಸೂಚಿಗಳಂತೆ ವಿಲೇವಾರಿ ಮಾಡುವುದು.

15. ಪ್ರತಿ ಕೊಠಡಿಯಲ್ಲಿನ ಪರೀಕ್ಷಾರ್ಥಿಗಳ ಗರಿಷ್ಠ ಮಿತಿ 1.5 ಮೀ ಸಾಮಾಜಿಕ ಅಂತರವನ್ನು ಕಾಪಾಡುವ ಷರತ್ತಿಗೊಳಪಟ್ಟಿದ್ದು ಪರೀಕ್ಷಾ ಕೊಠಡಿಗಳಲ್ಲಿ ಬೆಂಚುಗಳ ಮಧ್ಯೆ 1.5 ಮೀ ಅಂತರವಿರುವುದು ಹಾಗೂ ಒಂದು ಬೆಂಚಿನಲ್ಲಿ 2 ವಿದ್ಯಾರ್ಥಿ ಮಾತ್ರ ಕುಳಿತುಕೊಳ್ಳುವಂತೆ ಕ್ರಮವಹಿಸುವುದು.

16. ಪ್ರತಿ ಪರೀಕ್ಷಾ ಕೊಠಡಿಯಲ್ಲಿ ಒಂದು ಹ್ಯಾಂಡ್ ಸ್ಯಾನಿಟೈಜರ್ ಬಾಟಲಿಯನ್ನು ಕೊಠಡಿ ಮೇಲ್ವಿಚಾರಕರ ಬಳಿ ಇರಿಸುವುದು.

17. ಪ್ರತಿ ಪರೀಕ್ಷಾ ಕೊಠಡಿಗಳಲ್ಲಿನ ಗೋಡೆಗಳು, ಬಾಗಿಲುಗಳು, ಕಿಟಕಿಗಳು ಇತರೆ ಎಲ್ಲಾ ಮೇಲ್ಮೈಗಳನ್ನು ಸ್ಯಾನಿಟೈಜ್ ಮಾಡುವುದು ಮತ್ತು ಪರೀಕ್ಷಾರ್ಥಿ ಕುಳಿತುಕೊಳ್ಳುವ ಡೆಸ್ಕ್/ಬೆಂಚ್‌ಗಳನ್ನು ಪ್ರತಿ ಪರೀಕ್ಷಾ ಸೆಷನ್‌ಗೊಮ್ಮೆ ತೀವ್ರತರವಾಗಿ ಸ್ಯಾನಿಟೈಜ್ ಮಾಡುವುದು.

18. ಕರ್ತವ್ಯನಿರತ ಪರೀಕ್ಷಾ ಕೊಠಡಿ ಮೇಲ್ವಿಚಾರಕರು ನಿರಂತರವಾಗಿ ಮುಖಗವಸು ಮತ್ತು ಕೈಗವಸುಗಳನ್ನು ಧರಿಸುವುದು ಕಡ್ಡಾಯ.

19. ಪರೀಕ್ಷಾರ್ಥಿಗಳು ರೂಂ ಡೈರಿಯಲ್ಲಿ ಸಹಿ ಮಾಡಿದ ತಕ್ಷಣ ಕೈಗಳನ್ನು ಸ್ಯಾನಿಟೈಜ್ ಮಾಡಿಕೊಳ್ಳಲು ಕೊಠಡಿ ಮೇಲ್ವಿಚಾರಕರು ತಿಳಿಸುವುದು.

20. ಕೊರೊನಾ ಪಾಸಿಟಿವ್ ಅಥವಾ ಜ್ವರ, ಕೆಮ್ಮು ಇತರೆ ಕೊರೊನಾ ರೋಗಲಕ್ಷಣಗಳು ಇರುವ ಪರೀಕ್ಷಾರ್ಥಿಗಳು ಪ್ರತ್ಯೇಕ ಕೊಠಡಿಗಳಲ್ಲಿ ಪರೀಕ್ಷೆ ಬರೆಯಲು ವ್ಯವಸ್ಥೆ ಮಾಡುವುದು ಹಾಗೂ ಸದರಿ ಕೊಠಡಿ ಮೇಲ್ವಿಚಾರಕರು ನಿರಂತರವಾಗಿ ಪಿಪಿಇ ಕಿಟ್‌ಗಳನ್ನು ಧರಿಸಿರುವಂತೆ ನೋಡಿಕೊಳ್ಳುವುದು. ಪ್ರತ್ಯೇಕ ಕೊಠಡಿ ಇತರೆ ಪರೀಕ್ಷಾ ಕೊಠಡಿಗಳಿಗಿಂತ ಸಾಕಷ್ಟು ದೂರದಲ್ಲಿರುವಂತೆ ವ್ಯವಸ್ಥೆ ಮಾಡುವುದು.

21. ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಅತ್ಯವಶ್ಯಕವಾಗಿ ಬೇಕಾಗಿರುವ Pedal push cover ಕಸದ ಬುಟ್ಟಿಗಳು, ಥರ್ಮಲ್ ಸ್ಕ್ಯಾನರ್‌ಗಳು, ಮುಖಗವಸುಗಳು, ಕೈಗವಸುಗಳು, ಅಗತ್ಯವಿದ್ದಲ್ಲಿ ಪಿಪಿಇ ಕಿಟ್/ಗಳು, ಹ್ಯಾಂಡ್ ಸ್ಯಾನಿಟೈಜರ್ ಬಾಟಲಿಗಳು, ಲಿಕ್ವಿಡ್ ಸೋಪ್ ಡಿಸ್ಪೆನ್ಸರ್‌ಗಳು, ಹ್ಯಾಂಡ್ ವಾಷ್/ಬೇಸಿನ್‌ಗಳ ದುರಸ್ತಿ ಇನ್ನಿತರೆ ಎಲ್ಲಾ ಪರಿಕರ/ಸಾಮಗ್ರಿಗಳನ್ನು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಲಭ್ಯವಿರುವ ಅನುದಾನವನ್ನು ಬಳಸಿ ಸಂಪೂರ್ಣವಾಗಿ ಸದ್ಬಳಕೆಯಾಗುವಷ್ಟು ಪರಿಮಾಣದಲ್ಲಿ ಮಾತ್ರ ನಿಯಮಾನುಸಾರ ಖರೀದಿಸಲು ಕ್ರಮವಹಿಸಬಹುದಾಗಿದೆ.

22. COVID-19 ಗುಣಲಕ್ಷಣವಿರುವ ಸಿಬ್ಬಂದಿಯವರನ್ನು ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಬಾರದು.

23. COVID-19 Positive ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಶೇಖರಿಸಲು ಸಾಕಷ್ಟು ಗಾಳಿ ಬೆಳಕು ಮತ್ತು ಸಿಸಿ ಟಿವಿ ಕಣ್ಗಾವಲಿರುವ ಪ್ರತ್ಯೇಕ ನಿಯಂತ್ರಣ ಕೊಠಡಿಯಲ್ಲಿ 24 ಗಂಟೆಗಳ ಕಾಲ ಸಂಗ್ರಹಿಸಲು ಕ್ರಮವಹಿಸುವುದು. ಮುಖ್ಯ ಅಧೀಕ್ಷಕರ ಉಸ್ತುವಾರಿಯಲ್ಲಿ ಪಿಪಿಇ ಕಿಟ್ ಧರಿಸಿರುವ ಸಿಬ್ಬಂದಿ ಮಾತ್ರ ಉತ್ತರ ಪತ್ರಿಕೆಗಳನ್ನು ಇಡುವ ಮತ್ತು ತೆಗೆಯುವ ಕಾರ್ಯ ಕೈಗೊಳ್ಳುವುದು. 24 ಗಂಟೆಗಳ ಕಾಲ ಉತ್ತರ ಪತ್ರಿಕೆಗಳನ್ನು ಯಾರೂ ಮುಟ್ಟುವಂತಿಲ್ಲ. (ಸರ್ಕಾರಿ COVID ಆಸ್ಪತ್ರೆ ವೈದ್ಯರಿಂದ COVID-19 ದೃಢೀಕರಣವಿದ್ದಲ್ಲಿ ಮಾತ್ರ)

24. ಉತ್ತರ ಪತ್ರಿಕೆಗಳ ಮೇಲೆ ಯಾವುದೇ ಕಾರಣಕ್ಕೂ ಸ್ಯಾನಿಟೈಜರ್ ಸಿಂಪಡಿಸುವಂತಿಲ್ಲ.

**ಪರೀಕ್ಷಾ ಕೇಂದ್ರಗಳ ವಿದ್ಯಾರ್ಥಿಗಳು ಅನುಸರಿಸಬೇಕಾದ ಪ್ರಮಾಣಿತ ಕಾರ್ಯನಿರ್ವಹಣಾ ಕ್ರಮಗಳು (Standard Operating Procedure)**

1. ವಿದ್ಯಾರ್ಥಿಗಳು ಥರ್ಮಲ್‌ಚೆಕ್ ಹ್ಯಾಂಡ್ ಸ್ಯಾನಿಟೈಜೇಷನ್ ಮತ್ತು ಕನಿಷ್ಠ ಸಾಮಾಜಿಕ ಅಂತರ ಕಾಯ್ದುಕೊಳ್ಳುವಿಕೆಗಳಿಗೆ ಅನುವು ಮಾಡಿಕೊಡಲು, ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ 1.00 ಗಂಟೆಯ ಮುನ್ನ ಸಂಸ್ಥೆಯಲ್ಲಿ ಹಾಜರಿರುವುದು ಕಡ್ಡಾಯವಾಗಿರುತ್ತದೆ.

2. ವಿದ್ಯಾರ್ಥಿಗಳು ತಮ್ಮ ಕಾಲೇಜು ಐಡಿ ಮತ್ತು ಹಾಲ್ ಟಿಕೆಟ್‌ಗಳನ್ನು ಸದಾಕಾಲ ತಮ್ಮ ಬಳಿಯಿಟ್ಟುಕೊಂಡು ನಿರ್ಬಂಧಿತ ಸ್ಥಳಗಳಲ್ಲಿ ಓಡಾಡುವಾಗ ಪಾಸ್ ರೀತಿ ಬಳಸಬಹುದಾಗಿದೆ.

3. ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳು ಸದಾಕಾಲ ಎಲ್ಲಾ ಸ್ಥಳಗಳಲ್ಲೂ ಮುಖಗವಸು ಮತ್ತು ಕೈಗವಸುಗಳನ್ನು ಧರಿಸುವುದು, ಸ್ವಂತ ಬಳಕೆಗಾಗಿ ಹ್ಯಾಂಡ್ ಸ್ಯಾನಿಟೈಜರ್ ಬಾಟಲಿ ತರುವುದು ಕಡ್ಡಾಯ. ಡ್ರಾಯಿಂಗ್ ಉಪಕರಣಗಳು, ಕ್ಯಾಲುಕ್ಯುಲೇಟರ್ ಇತರೆ ಪರಿಕರಗಳ ಜೊತೆಗೆ ಅವಶ್ಯಕತೆಯಿದ್ದಲ್ಲಿ ಕುಡಿಯುವ ನೀರಿನ ಬಾಟಲಿ ತರಬಹುದಾಗಿದೆ. ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರ/ಕೊಠಡಿಗಳಲ್ಲಿ ಮೇಲ್ಕಂಡ ಯಾವುದೇ ಸಾಮಗ್ರಿ/ಪರಿಕರಗಳನ್ನು ಪರಸ್ಪರ ಹಂಚಿಕೊಳ್ಳುವುದು ನಿಷಿದ್ಧ.

4. ಪರೀಕ್ಷಾರ್ಥಿಗಳು ಪರೀಕ್ಷಾ ಕೇಂದ್ರಗಳಲ್ಲಿನ ದ್ವಾರಗಳು/ ಕ್ಯಾಂಟೀನ್/ಹ್ಯಾಂಡ್ ಸ್ಯಾನಿಟೈಜರ್ ಯಂತ್ರ/ ಶೌಚಾಲಯಗಳ ಹತ್ತಿರ ಜನಸಂದಣಿಯಾಗದಂತೆ ಕನಿಷ್ಟ 2.0 ಮೀಟರ್ ಅಂತರದ ಗುರುತಿನಲ್ಲಿ ಒಬ್ಬೊಬ್ಬರಾಗಿ ಹೋಗುವಂತೆ ನೋಡಿಕೊಂಡು ಸದಾಕಾಲ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಜನದಟ್ಟಣೆಯಾಗದಂತೆ ಸದ್ವರ್ತನೆಯಿಂದ ನಡೆದುಕೊಳ್ಳುವುದು.

5. ಯಾವುದೇ ವಿದ್ಯಾರ್ಥಿ COVID-19 Positive ಆಗಿದ್ದಲ್ಲಿ ಅಥವಾ ಜ್ವರ ಕೆಮ್ಮು &/ಶೀತ ರೋಗ ಲಕ್ಷಣಗಳಿಂದ ಬಳಲುತ್ತಿದ್ದರೆ ತಮ್ಮ ಸಹಪಾಠಿಗಳ ಸುರಕ್ಷತೆಯ ದೃಷ್ಟಿಯಿಂದ ಪರೀಕ್ಷೆ ಬರೆಯಲು ಪ್ರತ್ಯೇಕ ಕೊಠಡಿ ವ್ಯವಸ್ಥೆಗಾಗಿ ಕನಿಷ್ಠ 2 ದಿನ ಮುಂಚಿತವಾಗಿ ಸಂಸ್ಥೆಯ ಪ್ರಾಂಶುಪಾಲರು / ಮುಖ್ಯ ಅಧೀಕ್ಷಕರಿಗೆ ಮನವಿ ನೀಡುವುದು. COVID-19 Positive ಎಂದು ವರದಿ ಪರೀಕ್ಷಾ ಸಮಯಕ್ಕೆ ಮೊದಲು ಬಂದಲ್ಲಿ ಸಾಧ್ಯವಾದಷ್ಟು ಶೀಘ್ರವಾಗಿ ವರದಿ ಪ್ರಮಾಣಪತ್ರವನ್ನು ಸಂಸ್ಥೆಯ ಪ್ರಾಂಶುಪಾಲರಿಗೆ ಸಲ್ಲಿಸುವುದು.

ಸ್ಥಳೀಯ ಆಡಳಿತ/ ಜಿಲ್ಲಾಡಳಿತ/ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ/ UGC/AICTE /ರಾಜ್ಯ ಸರ್ಕಾರ/ಕೇಂದ್ರ ಸರ್ಕಾರ ಆಗಿಂದ್ದಾಗ್ಗೆ COVID-19 ನಿಯಂತ್ರಣದ ಸಂಬಂಧ ನೀಡುವ ಹೊರಡಿಸುವ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ನಿಗಾವಹಿಸಿ, ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಕ್ರಮವಹಿಸುವುದು.

ನಿರ್ದೇಶಕರು
ತಾಂತ್ರಿಕ ಶಿಕ್ಷಣ

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ – ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ: 1. ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು/ಮುಖ್ಯ ವೀಕ್ಷಕರು/ಉಪಮುಖ್ಯ ಅಧೀಕ್ಷಕರುಗಳಿಗೆ ಸಂಬಂಧಪಟ್ಟ ಪ್ರಾಚಾರ್ಯರುಗಳ ಮೂಲಕ – ಅಗತ್ಯ ಕ್ರಮಕ್ಕಾಗಿ
2. ನೋಡಲ್ ಮೌಲ್ಯಮಾಪನ ಕೇಂದ್ರಗಳ ನೋಡಲ್ ಅಧಿಕಾರಿಗಳು/ ಶಿಬಿರಾಧಿಕಾರಿಗಳು / ಸಹಾಯಕ ಶಿಬಿರಾಧಿಕಾರಿಗಳು/ಕೋಡಿಂಗ್ ಅಧಿಕಾರಿಗಳು –ಮಾಹಿತಿಗಾಗಿ
3. ಆಪ್ತಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
4. ಆಪ್ತಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ, ತಾಂತ್ರಿಕ ಶಿಕ್ಷಣ ಭವನ
5. ಆಪ್ತಶಾಖೆ, ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ
6. ಕಂಪ್ಯೂಟರ್ ಕೇಂದ್ರ – ಬಿಟಿಇಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
7. ಇ- ಆಡಳಿತ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು